


# ಬ್ಲೂಸ್ಕೈ ಮತ್ತೆ ಬಂದ ಜಾಕ್ ಡಾರ್ಸಿ

**‘ಟ್ವಿಟರ್’ ಹುಟ್ಟುಹಾಕಿ, ಕಾರಣಾಂತರಗಳಿಂದ ಕಂಪನಿ ತೊರೆದಿದ್ದ ಜಾಕ್ ಡಾರ್ಸಿ ಈಗ ಮತ್ತೆ ಸೋಷಿಯಲ್ ಮೀಡಿಯಾ ಪ್ಲಾಟ್‌ಫ್ಲಾರ್ಮ್‌ಗೆ ಕಾಲಿಟ್ಟಿದ್ದಾರೆ. ಅವರು ಕಾಲಿಟ್ಟಿರುವುದು ಟ್ವಿಟರ್ ಮೂಲಕವಲ್ಲ, ಹೊಸ ಆ್ಯಪ್‌ನೊಂದಿಗೆ!**

■ ಶಶಿಕುಮಾರ್ ಸಿ.

‘ಟ್ವಿಟರ್’ ಸಂಸ್ಥೆಯ ಸಹಸಂಸ್ಥಾಪಕರಾಗಿ, ಅದರ ಬೆಳವಣಿಗೆಗೆ ದುಡಿದು, ನಾನಾ ಕಾರಣಗಳಿಂದ ಕಂಪನಿಯಲ್ಲಿದ್ದ ತನ್ನೆಲ್ಲ ಷೇರುಗಳನ್ನು ಮಾರಾಟ ಮಾಡಿ, ಕಂಪನಿ ತೊರೆದಿದ್ದ ಜಾಕ್ ಡಾರ್ಸಿ ‘ಬ್ಲೂಸ್ಕೈ’ (Bluesky) ಸೋಷಿಯಲ್ ಮೀಡಿಯಾ ಪ್ಲಾಟ್‌ಫಾರ್ಮ್ ಮೂಲಕ ಮತ್ತೆ ಮುನ್ನೆಲೆಗೆ ಬಂದಿದ್ದಾರೆ. ‘ಬ್ಲೂಸ್ಕೈ’ ಆ್ಯಪ್ ಅನ್ನು ಪ್ರಾಯೋಗಿಕವಾಗಿ ಬಿಡುಗಡೆ ಮಾಡಿರುವ ಅವರು, ಟ್ವಿಟರ್‌ಗೆ ಸಡ್ಡು ಹೊಡೆಯಲು ಸಾಮಾಜಿಕ ಜಾಲತಾಣದ ವೇದಿಕೆಯನ್ನು ಸಜ್ಜುಗೊಳಿಸುತ್ತಿದ್ದಾರೆ.

ಟ್ವಿಟರ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಎಲಾನ್ ಮಸ್ಕ್ ಅಧಿಕಾರ ವಹಿಸಿಕೊಂಡ ಕೇವಲ ಮೂರು ದಿನಗಳಲ್ಲೇ ಜಾಕ್ ಡಾರ್ಸಿ ತಮ್ಮ ಹೊಸ ಆ್ಯಪ್ ಬಗ್ಗೆ ಮಾಹಿತಿ ಹೊರಹಾಕಿದ್ದರು.

ಬ್ಲೂಸ್ಕೈ, ಸೋಷಿಯಲ್ ಮೀಡಿಯಾ ಪ್ಲಾಟ್‌ಫಾರ್ಮ್‌ಗೆ ಎಂಟ್ರಿ ಕೊಡಲು ಸಂಪೂರ್ಣವಾಗಿ ಸಜ್ಜುಗೊಂಡಿದೆ. ಈ ಆ್ಯಪ್ ಈಗಾಗಲೇ ಲೈವ್ ಸಹ ಆಗಿದೆ. ಬ್ಲೂಸ್ಕೈ ಟ್ವಿಟರ್‌ನ ಪ್ರತಿರೂಪದಂತಿದ್ದರೂ ಹಲವು ವಿಶೇಷ ಫೀಚರ್‌ಗಳನ್ನು ಒಳಗೊಂಡಿದೆ ಎನ್ನಲಾಗಿದೆ. ಸದ್ಯ ಆ್ಯಪಲ್ ಸ್ಟೋರ್‌ನಲ್ಲಿ ಆ್ಯಪ್ ಲಭ್ಯವಿದ್ದು, ಬೀಟಾ ಐಫೋನ್ ಬಳಕೆದಾರರಿಗೆ ಮಾತ್ರ ಬಳಸಲು ಸಾಧ್ಯ. ಕೆಲ ತಿಂಗಳಲ್ಲೇ ಇದು ಎಲ್ಲರ ಬಳಕೆಗೆ ಲಭ್ಯವಾಗಲಿದೆ.

‘ಫೆಬ್ರುವರಿ 17ರಿಂದ ಬ್ಲೂಸ್ಕೈ ಅಪ್ಲಿಕೇಷನ್ 2000 ಸ್ಮಾರ್ಟ್‌ಫೋನ್‌ಗಳಲ್ಲಿ ಇನ್‌ಸ್ಟಾಲ್ ಆಗಿದೆ. ಇದು ಹೆಚ್ಚುಕಮ್ಮಿ ಟ್ವಿಟರ್‌ನಂತೆಯೇ ಕಾರ್ಯನಿರ್ವಹಿಸುತ್ತಿದೆ’ ಎಂದು ಹಲವು ಅಂತರರಾಷ್ಟ್ರೀಯ ಮಾಧ್ಯಮಗಳು ವರದಿ ಮಾಡಿವೆ. ವರದಿಯಲ್ಲಿ ಉಲ್ಲೇಖವಾಗಿರುವಂತೆ, 256 ಅಕ್ಷರಗಳ ಮಿತಿ ಹಾಗೂ ಫೋಟೊ ಜೊತೆಗೆ ಪೋಸ್ಟ್ ಮಾಡಲು ಬ್ಲೂಸ್ಕೈನಲ್ಲಿ ಅವಕಾಶ ಕಲ್ಪಿಸಲಾಗಿದೆ. ಇದು ಮೈಕ್ರೊ ಬ್ಲಾಗಿಂಗ್ ಪ್ಲಾಟ್‌ಫಾರ್ಮ್ ಆಗಿಯೂ ಕಾರ್ಯನಿರ್ವಹಿಸಲಿದೆ.

ಆ್ಯಪ್‌ನಲ್ಲಿ ಫಾಲೊ, ಶೇರ್, ಡೇಟ್ಸ್ ಫೀಡ್, ಮ್ಯೂಟ್ ಮತ್ತು ಬ್ಲಾಕ್ ಅಕೌಂಟ್‌ನಂತಹ ಹಲವಾರು ಆಯ್ಕೆಗಳಿವೆ. ಜೊತೆಗೆ ಫೋಟೊ, ಹಿನ್ನೆಲೆ ವಿವರ, ಬಯೋ ಮತ್ತು ಮೆಟ್ರಿಕ್ಸ್‌ನಂತಹ ಪ್ರೊಫೈಲ್ ವಿವರಗಳನ್ನು ನಮೂದಿಸಬಹುದಾಗಿದೆ. ಆರಂಭಿಕ ಹಂತದ ಪರೀಕ್ಷಾರ್ಥ ಬಳಕೆಯಲ್ಲಿರುವ ಬ್ಲೂಸ್ಕೈ, ಈಗ ವಿಶೇಷ ಆಹ್ವಾನಿತರಿಗೆ ಮಾತ್ರ ದೊರೆಯುತ್ತಿದೆ. ಬ್ಲಾಕ್ ಆಯ್ಕೆಯು ವಿಶೇಷವಾಗಿ ಲಭ್ಯವಿರಲಿದೆ.

ಜಾಕ್ ಡಾರ್ಸಿ 2019ರಲ್ಲೇ ‘ಬ್ಲೂಸ್ಕೈ’ ಹೆಸರಿನಲ್ಲೇ ಸಂಸ್ಥೆಯೊಂದನ್ನು ನೋಂದಣಿ ಮಾಡಿಸಿದ್ದರು ಎನ್ನುವ ಮಾಹಿತಿಯೂ ಈಗ ಹೊರಬಿದ್ದಿದೆ. ಟ್ವಿಟರ್ ಸಿಇಒ ಆಗಿದ್ದಾಗಲೇ ಬ್ಲೂಸ್ಕೈ ಪ್ರಾರಂಭಿಸುವ ಯೋಚನೆಯಲ್ಲಿದ್ದ ಡಾರ್ಸಿ ಅದಕ್ಕಾಗಿ ಪೂರ್ವತಯಾರಿ ಮಾಡಿಕೊಂಡಿದ್ದರು. ‘ಹೊಸ ಕಂಪನಿಯು ಸೋಷಿಯಲ್ ಮೀಡಿಯಾ ಅಪ್ಲಿಕೇಷನ್ ಮೇಲೆಯೇ ಕಾರ್ಯನಿರ್ವಹಿಸಲಿದ್ದು, ಅದಕ್ಕೆ ಬ್ಲೂಸ್ಕೈ ಎಂದೇ ಹೆಸರಿಸಬಹುದು’ ಎಂಬ ಮಾಧ್ಯಮಗಳ ಊಹೆ ಈಗ ನಿಜವಾಗಿದೆ.

ಮುಕ್ತ ಸಾಮಾಜಿಕ ಮಾಧ್ಯಮ ವೇದಿಕೆಯನ್ನು ಕಟ್ಟಲು ಬಳಕೆದಾರರಿಗೇ ಬ್ಲೂಸ್ಕೈ ಅವಕಾಶ ಕಲ್ಪಿಸಲಿದೆ. ಜಾಕ್ ಡಾರ್ಸಿ ಅಧಿಕಾರದಲ್ಲಿದ್ದಾಗ ಕೆಲವು ವರ್ಷಗಳವರೆಗೆ ಬ್ಲೂಸ್ಕೈ ಕಂಪನಿಗೆ ಟ್ವಿಟರ್ ಆರ್ಥಿಕ ನೆರವನ್ನು ನೀಡಿದೆ ಎನ್ನಲಾಗಿದ್ದು, ಈ ವ್ಯವಹಾರವು ಯಾವುದೇ ನಿಬಂಧನೆಗಳಿಗೆ ಒಳಪಟ್ಟಿಲ್ಲ. ಕೇವಲ ಆರ್ಥಿಕ ನೆರವನ್ನಷ್ಟೇ ಟ್ವಿಟರ್‌ನಿಂದ ಪಡೆಯಲಾಗಿದೆ. ಸಾರ್ವಜನಿಕರ ಮುಕ್ತ ಸಂವಹನಕ್ಕೆ ಪೂರಕವಾಗಿ ಅಧ್ಯಯನ ಮತ್ತು ತಂತ್ರಜ್ಞಾನ ಹುಟ್ಟುಹಾಕುವ ನಿಟ್ಟಿನಲ್ಲಿ ಕಂಪನಿ ಕಾರ್ಯನಿರ್ವಹಿಸಲಿದೆ ಎಂಬುದು ಕಂಪನಿಯ ಹೇಳಿಕೆ.

ಪ್ರತ್ಯೇಕ ಕಂಪನಿಯಾಗಿ ರೂಪುಗೊಂಡಿರುವ ಬ್ಲೂಸ್ಕೈ ಸಂಸ್ಥೆಯು ಕಳೆದ ವರ್ಷ 13 ಮಿಲಿಯನ್ ಡಾಲರ್ ಮೊತ್ತದ ದೇಣಿಗೆ ಸಂಗ್ರಹಿಸಿದೆ. ಟ್ವಿಟರ್‌ನಲ್ಲಿ ಕೆಲಸ ಮಾಡಿದ್ದ ಹಲವು ಮಂದಿ ಬ್ಲೂಸ್ಕೈ ಪ್ರಾಜೆಕ್ಟ್‌ನಲ್ಲಿ ಜಾಕ್ ಡಾರ್ಸಿಯೊಂದಿಗೆ ಮತ್ತೆ ಜೊತೆಗೂಡಿದ್ದಾರೆ. ಹಳೆ ಬಾಸು, ಹೊಸ ಪ್ರಾಜೆಕ್ಟ್ ಎನ್ನುವಂತಿರುವ ಈ ಸಮ್ಮಿಲನವು ಮತ್ತೊಂದು ದೈತ್ಯ ಸೋಷಿಯಲ್ ಮೀಡಿಯಾ ವೇದಿಕೆ ರೂಪುಗೊಳ್ಳಲು ಕಾರಣವಾಗುತ್ತದಾ? ಕಾದು ನೋಡಬೇಕಿದೆ. ■